# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ನಿರ್ದೇಶಕರು ನಗರ ಯೋಜನೆ (ಪಶ್ಚಿಮ) ರವರ ಕಛೇರಿ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು–560020

ಸಂಖ್ಯೆ: ADTP(W)/CC/07/22-23 ದಿನಾಂಕ: 27-07-22

ಅನುಸೂಚಿ(VII)

(ಉಪ ವಿಧಿ ಸಂಖ್ಯೆ:5.3)

ವಿಷಯ:– **PRJ/4112/21-22,** ರ ಅನ್ವಯ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ನೀಡುವ ಬಗ್ಗೆ.

ಉಲ್ಲೇಖ:– 1. ನಕ್ಷೆ ಮಂಜೂರಾತಿ ಸಂಖ್ಯೆ:– **PRJ/4112/21-22,** ದಿನಾಂಕ : 21–09–2021
2. ಅರ್ಜಿದಾರರ ಅರ್ಜಿ ದಿನಾಂಕ: 05–05–2022

* * * * * *

ಸ್ವತ್ತಿನ ಸಂಖ್ಯೆ: ನಂ–69/2–ಎ1, 4ನೇ ಫೇಸ್, 4ನೇ ಬ್ಲಾಕ್, ಪಶ್ಚಿಮ ಕಾರ್ಡ್ ರಸ್ತೆ, ಅಗ್ರಹರ ದಾಸರಹಳ್ಳಿ, ಬೆಂಗಳೂರು ವಾರ್ಡ್ ಸಂಖ್ಯೆ: 105 ರಲ್ಲಿ ನಿರ್ಮಿಸಿರುವ ವಾಣಿಜ್ಯ ಮತ್ತು ವಸತಿ ಸಮುಚ್ಚಯ ಕಟ್ಟಡ ಉಪಯೋಗಕ್ಕೆ ಈ ಕಛೇರಿಯಿಂದ **PRJ/4112/21-22,** ದಿನಾಂಕ: 21–09–2021 ರಂದು ನಕ್ಷೆ ಮಂಜೂರಾತಿ ನೀಡಲಾಗಿತ್ತು. ಉಲೇಖ (2) ರಲ್ಲಿನ ಅರ್ಜಿದಾರರ ಮನವಿ ಮೇರೆಗೆ ವಾಣಿಜ್ಯ ಮತ್ತು ವಸತಿ ಸಮುಚ್ಚಯ ಕಟ್ಟಡ ಉಪಯೋಗಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ: 07-05-2022 ರಂದು ಸ್ವತ್ತಿನ ಸ್ಥಳ ಪರಿಶೀಲಿಸಿದ್ದು, ಅರ್ಜಿದಾರರು ವಲಯ ನಿಯಮಾನುವಳಿಯಂತೆ ಅಗತ್ಯ ನಡು ಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ಅಳವಡಿಸಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ.70,000/–(ಡಿಡಿ ನಂ– **086030 ದಿನಾಂಕ: 13–07–2022, State Bank of India,** ಅರ್ಜಿದಾರರು ಪಾವತಿಸಿದ್ದು, ಸದರಿ ಮೊತ್ತದ **ಡಿ.ಡಿಯ ರಶೀದಿ ಸಂಖ್ಯೆ– RE-ifms210-TP/000036 ದಿನಾಂಕ: 27–07–2022** ರಂದು ಸಂದಾಯಿಸಿಕೊಳ್ಳಲಾಗಿದೆ ವಾಣಿಜ್ಯ ಮತ್ತು ವಸತಿ ಸಮುಚ್ಚಯ ಕಟ್ಟಡ ಉಪಯೋಗಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೆ ಒಳಪಡಿಸಿ ನೀಡಲಾಗಿದೆ.

1. ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು, ಉದ್ದೇಶಿತ ಕಟ್ಟಡದಲ್ಲಿ ವಲಯ ನಿಯಮಾವಳಿಯ ಪರಿಮಿತಿಯೊಳಗೆ ಯಾವುದೇ ಬದಲಾವಣೆ ಮಾಡಲು ಉದ್ದೇಶಿಸಿದ್ದಲ್ಲಿ ನಿಗಧಿತ ಅವಧಿಯೊಳಗೆ ಅಗತ್ಯ ಮಾರ್ಪಡು ನಕ್ಷೆಗೆ ಮಂಜೂರಾತಿ ಪಡೆದು ನಂತರ ಕಾಮಗಾರಿಯನ್ನು ಮುಂದುವರಿಸುವುದು.
2. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸಿರುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3. ಕಟ್ಟಡದಲ್ಲಿ ಮಂಜೂರಾತಿ ನಕ್ಷೆಯಂತೆ ಅಗತ್ಯ ಸಂಖ್ಯೆಯ ವಾಹನ ನಿಲ್ದಾಣಕ್ಕೆ ಸ್ಥಳಾವಕಾಶವನ್ನು ಕಾಯ್ದಿರಿಸುವುದು.
4. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ತೊಂದರೆಯಾಗದಂತೆ ಕೆಲಸಗಾರರಿಗೆ ತಾತ್ಕಲಿಕ ಶೌಚಾಲಯವನ್ನು ನಿರ್ಮಿಸತಕ್ಕದ್ದು.
5. ಕಟ್ಟಡ ಕಾಮಗಾರಿ ಸ್ಥಳದಲ್ಲಿ ನಕ್ಷೆಯನ್ನು ಪ್ರದರ್ಶಿಸತಕ್ಕದ್ದು.

27/07/2022

ಸಹಾಯಕ ನಿರ್ದೇಶಕರು
ನಗರ ಯೋಜನೆ (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಇವರಿಗೆ,**

ಶ್ರೀಮತಿ.ಕೆ.ಎಸ್.ಉಮಾದೇವಿ,
ಶ್ರೀಮತಿ.ಕೊಮಲ ಜಗದೀಶ್ ಮತ್ತು
ಶ್ರೀಮತಿ.ತೇಜಸ್ವಿನಿ.ಜೆ.
ನಂ–69/2–ಎ1, 4ನೇ ಫೇಸ್, 4ನೇ ಬ್ಲಾಕ್,
ಪಶ್ಚಿಮ ಕಾರ್ಡ್ ರಸ್ತೆ, ಅಗ್ರಹರ ದಾಸರಹಳ್ಳಿ,
ಬೆಂಗಳೂರು ವಾರ್ಡ್ ಸಂಖ್ಯೆ: 105

Scanned with OKEN Scanner